

# ಶ್ರೀಗಂಧ ಮರದ ವ್ಯಾಪಾರಿ

ಕಥೆ: ಪರಮಹಂಸದಾಸ

ಚಿತ್ರ: ಶಂಕರ್

ಒಮ್ಮೆ ರಾಜ ಮಹೇಂದ್ರನು ತನ್ನ ಮಂತ್ರಿಯ ಜೊತೆ ವೇಷ ಮರೆಸಿಕೊಂಡು ತನ್ನ ರಾಜಧಾನಿಯನ್ನು ಸುತ್ತಿದ. ದಾರಿಯಲ್ಲಿ ಅವರು ಒಬ್ಬನನ್ನು ಕಂಡರು. ಅವನು ಕುಳಿತುಕೊಂಡು ಆಳವಾಗಿ ಯೋಚಿಸುತ್ತಿದ್ದ. ಮರುದಿನವೂ ಅದೇ ಜಾಗದಲ್ಲಿ ಅವನು ಅದೇ ರೀತಿ ಕುಳಿತಿದ್ದುದನ್ನು ಕಂಡರು.




ಮಂತ್ರಿಯ ಆಜ್ಞೆಯಂತೆ ಸಿಂಹಾಸನ, ಮೇಜು ಮತ್ತು ಇತರ ಪೀಠೋಪಕರಣಗಳೆಲ್ಲಾ ತಯಾರಿಸಲ್ಪಟ್ಟವು. ಒಂದು ಸುಂದರವಾದ ರಥವನ್ನೂ ಸಹ ಮಾಡಿಸಲಾಯಿತು.
ಎಂತಹ ಸುಂದರವಾದ ಮರಗೆಲಸ.
5
ಕೆಲವು ವಾರಗಳ ನಂತರ, ರಾಜನು ಮತ್ತು ಮಂತ್ರಿಯು ಮತ್ತೆ ವೇಷ ಮರೆಸಿಕೊಂಡು ರಾಜಧಾನಿಯನ್ನು ಸುತ್ತಲು ಹೋದರು.
ಮಂತ್ರಿ! ನೋಡಿದೆಯಾ, ಅದೇ ವ್ಯಕ್ತಿ. ಅಂದು ನಾವು ಕಂಡೆವಲ್ಲಾ ಅವನೇ ಇವನು. ಆದರೆ ಇಂದೇಕೊ ಅವನ ಬಗ್ಗೆ ಕೆಟ್ಟ ಭಾವನೆ ಬರುತ್ತಿಲ್ಲ.
ಹೌದು. ಅದೇ ವ್ಯಕ್ತಿ. ಆದರೆ ಅವನ ಭಾವನೆ ಬೇರೆ ಇರುವಂತಿದೆ.
6
ಇದು ಆಶ್ಚರ್ಯವಲ್ಲವೆ? ಆ ದಿನ ನಾನಿವನನ್ನು ಶಿಕ್ಷಿಸಬೇಕೆಂದಿದ್ದೆ. ಆದರೆ ಇಂದು ಅವನೇಕೋ ನಿರಪರಾಧಿಯಂತೆ ಕಾಣುತ್ತಾನಲ್ಲ. ಕಾರಣವೇನಿರಬಹುದು?
7
ಅರಮನೆಗೆ ಹಿಂದಿರುಗಿದ ನಂತರ ನಾನಿದನ್ನು ತಮಗೆ ವಿವರಿಸುತ್ತೇನೆ.



ಅರಮನೆಯ ಉದ್ಯಾನದಲ್ಲಿ........
8
ಮಹಾರಾಜ! ಅವನೊಬ್ಬ ಶ್ರೀಗಂಧದ ಮರದ ವ್ಯಾಪಾರಿ. ಅವನ ವ್ಯಾಪಾರ ಬಹಳ ಕಳೆಗುಂದಿತ್ತು. ಆದ್ದರಿಂದ ಅವನು ಯೋಚಿಸುತ್ತಿದ್ದ, ರಾಜನೇನಾದರೂ ಸತ್ತರೆ, ಅವನನ್ನು ಸುಡಲು ಶ್ರೀಗಂಧದ ಮರವನ್ನು ನನ್ನಿಂದ ಕೊಂಡುಕೊಳ್ಳುತ್ತಾರೆ, ಎಂದು. ಆದ್ದರಿಂದ ಮನಸ್ಸಲ್ಲೇ ಅವನು ನಿಮ್ಮ ಸಾವನ್ನು ಬಯಸುತ್ತಿದ್ದ. ಅವನ ಭಾವನೆ ನಿಮ್ಮ ಮನಸ್ಸಿನ ಮೇಲೂ ಪರಿಣಾಮ ಬೀರಿತು. ಹೀಗಾಗಿ ಸ್ವಾಭಾವಿಕವಾಗಿಯೇ ನಿಮ್ಮಲ್ಲಿ ಅವನ ಬಗ್ಗೆ ದ್ವೇಷ ಉಂಟಾಯಿತು.
9
ಈಗ ನಾವು ಅವನ ಶ್ರೀಗಂಧದ ಮರಮಟ್ಟುಗಳನ್ನೆಲ್ಲಾ ಪೀಠೋಪಕರಣಗಳಿಗಾಗಿ ದೇವಸ್ಥಾನದ ರಥಕ್ಕಾಗಿ ಕೊಂಡುಕೊಂಡಿದ್ದೇವಲ್ಲವೆ?
ಆದರೆ ಈಗ ಏಕೆ ಅವನ ಬಗ್ಗೆ ಆ ದ್ವೇಷ ಭಾವನೆ ಇಲ್ಲ?
10
ಸರಿ, ಆದರೇನಂತೆ?
ಈಗ ಅವನು ನಿಮ್ಮನ್ನು ವಂದಿಸುತ್ತಾನೆ, ನೀವಿನ್ನೂ ಬಹುಕಾಲ ಬದುಕಿರಲೆಂದು ಆಶಿಸುತ್ತಿದ್ದಾನೆ. ಆದ್ದರಿಂದ ನಿಮಗೂ ಅವನ ಬಗ್ಗೆ ಯಾವುದೇ ದ್ವೇಷ ಇಲ್ಲ.
11
ಅಂದರೆ, ಯಾರಾದರೂ ನಮಗೆ ಕೇಡನ್ನು ಬಯಸುತ್ತಿದ್ದರೆ, ನಮಗೇ ಗೊತ್ತಿಲ್ಲದಂತೆ ಅವನ ಬಗ್ಗೆ ಕೆಟ್ಟ ಭಾವನೆ ನಮಗೂ ಉಂಟಾಗುತ್ತದೆ ಎಂದೇ ನಿನ್ನ ಮಾತಿನ ಅರ್ಥ?
ಅಷ್ಟೇ ಅಲ್ಲ, ಅದು ಇನ್ನೊಂದು ರೀತಿಯಲ್ಲೂ ಕೆಲಸ ಮಾಡುತ್ತದೆ. ಇತರರಿಗೆ ನಾವು ಶುಭವನ್ನೇ ಕೋರುತ್ತಿದ್ದರೆ ಅವರೂ ಸಹ ನಮ್ಮ ಒಳಿತನ್ನೇ ಬಯಸುತ್ತಿರುತ್ತಾರೆ.